


ಬೆಳಗಾವಿಯ
ರಾಣಿ ಚನ್ನಮ್ಮ ವೃತ್ತ



ಮೂಡಲಗಿ ತಾಲ್ಲೂಕಿನ ತುಕ್ಕಾನಟ್ಟಿಯಲ್ಲಿ
ಲಕ್ಷ್ಮೀದೇವಿಯ ವೈಭವದ ರಥೋತ್ಸವ



# ವೇಣುಗ್ರಾಮದ ವೇಣುನಿನಾದ

ಬೆಳಗಾವಿಯನ್ನ 12ನೇ ಶತಮಾನದಾಗ ರಟ್ಟರು ಆಳೋ ಮುಂದ ಕಿಲ್ಲಾ ಕಟ್ಟಿಸಿದ್ರಂತ. ಆವಾಗ ಬೆಳಗಾವಿ ಹೆಸರು 'ವೇಣುಗ್ರಾಮ'. ಅಂದರ, ಬಿದಿರಿನ ಊರು ಅಂತಿತ್ತು. ಆಮ್ಯಾಲೆ ಯಾದವರು, ವಿಜಯನಗರದ ಅರಸರು, ದೆಹಲಿಯ ಖಿಲ್ಜಿಗಳು, ಹೈದರ್‌ಅಲಿ ಮತ್ತು ಪೇಶ್ವೆಗಳು ಆಳಿದ್ರು. ಗೋವಾಕ್ಕ ಸಮೀಪ ಮತ್ತ ಇಲ್ಲಿ ಹವಾಗುಣ ಛೊಲೊ ಇದ್ದದ್ದಕ್ಕ ಬ್ರಿಟಿಷರು ಇಲ್ಲೆ ದಂಡುಪ್ರದೇಶ ಸ್ಥಾಪಿಸಿದ್ರು. ಸ್ವಾತಂತ್ರ್ಯ ಹೋರಾಟದಾಗನೂ 'ಬೆಳಗಾವಿ' ಹೆಸರು ಮಾಡೇದ.

■ ಮಧುರಾ ಕರ್ಣಮ್

'ಯಾರ್‍ರೀ ಕಿಲ್ಲಾ?' ಅಂತ ವರ್ಲಿಕ್ಕತ್ತರಂದ್ರ ಬೆಳಗಾವಿ ಬಂತಂತ ಅರ್ಥ. ಈ ಕಿಲ್ಲಾ ಬೆಳಗಾವಿಗೆ ಹೆಬ್ಬಾಗಿಲಿದ್ಧಂಗ ನೋಡ್ರಿ. ಬಾಗಲದಾಗ ಸಣ್ಣ ದುರ್ಗಾದೇವತಿ ಗುಡಿ. ಒಳಗೆಲ್ಲಾ ಸರ್ಕಾರಿ ಆಫೀಸುಗಳು. ನಮ್ಮಪ್ಪ ಮೂವತ್ತು ವರ್ಷ ಸೈಕಲ್ ಹೊಡಕೋತ ಇಲ್ಲಿ ಆಫೀಸಿಗೆ ಬರತಿದ್ರು. ಬೆಳಗಾವಿಯ ಪ್ರಸಿದ್ಧ ಕಮಲ ಬಸ್ತಿ ಇರೋದು ಇಲ್ಲೆ. ಈ ಕ್ವಾಟಿ ಎದುರಿಗೆ ಇದ್ದ ಕೆರಿನ ಈಗ ಅಭಿವೃದ್ಧಿ ಮಾಡಿ ಭಾಳ ಛಂದ ಮಾಡ್ಯಾರ. ಹಂಗ ಮುಂದ ಬಂದರ ಬಸ್‌ಸ್ಟ್ಯಾಂಡ್ ಬರ್ತದ.

ಅಲ್ಲಿಂದ ಸರಳ ಮುಂದ ಬಂದರ ನಿಮಗ ಚನ್ನಮ್ಮಾ ಸರ್ಕಲ್ ಕಾಣಸ್ತದ. ಚನ್ನಮ್ಮನ ಮೂರ್ತಿ ಕನ್ನಡಿಗರ ಘಟ್ಟಿತನದ ಪ್ರತೀಕ. ಎದುರಿಗೆ ಗಣಪ್ಪನ ಗುಡಿಯಿಂದ ಸೀದಾ ಮುಂದ ಬಂದರ 'ಬೊಗಾರ್‌ವೇಸ್' ಅಂತ ಪ್ರಸಿದ್ಧವಾಗಿರೊ 'ಧರ್ಮವೀರ ಸಂಭಾಜಿ ಚೌಕ' ಬರ್ತದ. ಇದು ಬೆಳಗಾವಿಯ ಹೃದಯ ಭಾಗ. ಯಾಕಂದ್ರ ಎಲ್ಲಾ ಮಂದಿದೂ ಹೆಚ್ಚಿನಂಶ ಮಾರ್ಕೆಟಿಂಗ್ ಇಲ್ಲೇ ಇರ್ತದ. ಮಾರುತಿ ಗಲ್ಲಿವಳಗಿನ ಮಾರುತಿ ಗುಡಿ, ಖಡೆ ಬಝಾರ್, ರವಿವಾರ ಪೇಟ... ಇಂಥಾವೆಲ್ಲಾ ಹೃದಯದೊಳಗಿನ ಕವಾಟಗಳಿದ್ಧಂಗ. ಬೇಕಾದಷ್ಟು ಮಾಲ್‌ಗೊಳು ಬಂದರೂ ಇಲ್ಲೇನ ಗದ್ದಲ ಕಡಿಮ್ಯಾಗಿಲ್ಲ ಬಿಡ್ರಿ.

ಇಲ್ಲೆ ಗಲ್ಲಿಗೊಳು (ಚಿಕ್ಕ ಬೀದಿಗಳು) ಭಾಳ. ಕೋನವಾಳ ಗಲ್ಲಿ, ಬಸವಣ್ಣ ಗಲ್ಲಿ, ಗೊಂಧಳಿ ಗಲ್ಲಿ... ಹಂಗ ಬೇಕಾದಷ್ಟವ. ಇಲ್ಲೆಲ್ಲಾ ಹಳೇ ಕಾಲದ ರೇಲ್ವೆ ಡಬ್ಬಿಯಂಥಾ ಮನಿಗೋಳು. ಮುಂಚಿ ಬಾಗಲ ಒಂದ ಗಲ್ಲಿ ಆದರ ಹಿತ್ತಲ ಬಾಗಲ ಇನ್ನೊಂದು ಗಲ್ಲಿ. ಟಿಳಕ ಚೌಕದ ರಾಯರ ಮಠ ಧಾರ್ಮಿಕ ಕೇಂದ್ರನೂ ಹೌದು. ಬೊಗಾರ್‌ವೇಸ್‌ದಿಂದ ಸರಳ ಹೋದ್ರ ಗೋವಾವೇಸ್